ಮಧ್ಯಂತ ಅರ್ಜಿಯ ಮೇಲಿನ ಆದೇಶದ ಮೇರೆಗೆ

ದಿನಾಂಕ 21-10-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್ ವಕೀಲರಿಂದ.**

ನಾನು ದ್ವಿತೀಯ ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುತ್ತವೆ. ನನ್ನ ತಾತನ ಹೆಸರು ಸಕ್ರೆಪ್ಪಗೌಡ ಎಂದು ಇರುತ್ತದೆ. ಸದರಿ ಸಕ್ರೆಪ್ಪಗೌಡ ಇವರಿಗೆ 04 ಜನ ಗಂಡು ಮಕ್ಕಳು ಅವರುಗಳೆಂದರೆ, ಸಿದ್ಲಿಂಗಪ್ಪಗೌಡ, ತೇಜರಾಜ ಪಾಟೀಲ್, ವಿರುಪಾಕ್ಷಪ್ಪಗೌಡ ಮತ್ತು ಬಸವರಾಜಪ್ಪಗೌಡ ಎಂದು ಇರುತ್ತಾರೆ ಹಾಗೂ ಶಂಕ್ರಮ್ಮ ಎಂಬ ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಸದರಿಯವರುಗಳಲ್ಲಿ ಬಸವರಾಜಪ್ಪಗೌಡ ಮತ್ತು ಶಂಕ್ರಮ್ಮ ಮಾತ್ರ ಜೀವಿತ ಇರುತ್ತಾರೆ.

ನಾನು ಕೊಪ್ಪರ, ಯಾದಗಿರಿ ಮತ್ತು ಗುಲಬರ್ಗಾದಲ್ಲಿ ಇರುತ್ತೇನೆ. ಕೊಪ್ಪರ ಗ್ರಾಮದಲ್ಲಿರುವ ಮನೆ ನಂಬರ ಹೇಳಲು ಬರುವುದಿಲ್ಲ. ಸದರಿ ಮನೆ ನನ್ನ ಅಕ್ಕಳಾದ ಸೂಗಮ್ಮ ಇವರ ಹೆಸರಿನಲ್ಲಿ ಇರುತ್ತದೆ. ಸದರಿ ಕೊಪ್ಪರ ಗ್ರಾಮದಲ್ಲಿ ಒಂದು ಮನೆ ಮತ್ತು ಒಂದು ಖಾಲಿ ಜಾಗ ಇರುತ್ತದೆ. ಸದರಿ ಖಾಲಿ ಜಾಗ ನನ್ನ ಹೆಸರಿನಲ್ಲಿ ಇರುತ್ತದೆ. ಯಾದಗಿರಿ ಮತ್ತು ಗುಲಬರ್ಗಾದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಮನೆಗಳು ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಸೇರಿದಂತೆ ಈಗ ಅಂದಾಜು 65 ಎಕರೆ ಜಮೀನು ಇರುತ್ತದೆ. ನಿಮ್ಮ ತಂದೆಯ ಹೆಸರಿನಲ್ಲಿ ಎಷ್ಟು ಜಮೀನು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಅಂದಾಜು 50 ರಿಂದ 55 ಎಕರೆ ಜಮೀನು ಇರಬಹುದು ಎಂದು ನುಡಿಯುತ್ತಾರೆ. ನಮ್ಮ ತಂದೆಯವರ ಹೆಸರಿನಲ್ಲಿರುವ ಎಲ್ಲಾ ಜಮೀನುಗಳು ಈಗ ನಮ್ಮ ತಾಯಿಯ ಹೆಸರಿನಲ್ಲಿ ಇರುತ್ತವೆ. ನಮ್ಮ ತಂದೆಗೆ ಸೇರಿದ ಆಸ್ತಿಗಳು ಶಾಂತಮ್ಮ ಮತ್ತು ಆಕೆಯ ಮಕ್ಕಳಾದ ಸೂಗಮ್ಮ, ಶಿವಕುಮಾರ ಹಾಗೂ ಚಂದ್ರಶೇಖರ ಇವರ ಹೆಸರುಗಳಲ್ಲಿ ಇವೆಯೇ ಎಂಬ ಪ್ರಶ್ನೆಗೆ ಅವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ ಹಾಗೂ ಅವರ ಹೆಸರುಗಳಲ್ಲಿ ನಮ್ಮ ತಂದೆಗೆ ಸೇರಿದ ಸ್ವತ್ತುಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳನ್ನು ನಮ್ಮ ತಂದೆ ಖರೀದಿಸುವ ಪೂರ್ವದಲ್ಲಿ ಬ್ರಾಹ್ಮಣರ ಹೆಸರಿನಲ್ಲಿ ಇತ್ತು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಂದೆಯ ಹೆಸರಿಗೆ ಯಾವ ಆಧಾರದ ಮೇಲಿಂದ ಮತ್ತು ಯಾವ ದಿನಾಂಕದಂದು ವರ್ಗಾವಣೆ ಆಗಿರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳು ನನ್ನ ತಂದೆಗೆ ಯಾವ ರೀತಿ ಮತ್ತು ಯಾರಿಂದ ಬಂದಿರುತ್ತವೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಿಗೆ ನನ್ನ ತಂದೆ ಮಾಲೀಕ ಎಂದು

ತೋರಿಸುವ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ತಂದೆ ವಿಜಯಲಕ್ಷ್ಮೀ ಇವರೊಂದಿಗೆ ವಾಸವಿದ್ದರು ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ನನ್ನ ತಂದೆ ಮತ್ತು ವಿಜಯಲಕ್ಷ್ಮೀ ನಡುವೆ ಯಾವ ರೀತಿ ಸಂಬಂಧ ಇತ್ತು ಎಂದು ನನ್ನ ವಾದ ಪತ್ರದಲ್ಲಾಗಲೀ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ತೇಜರಾಜ ಪಾಟೀಲ್ ಮೊದಲ ಬಾರಿಗೆ ವಿಜಯಲಕ್ಷ್ಮೀ ಇವರನ್ನು ವಿವಾಹ ಆಗಿದ್ದು ಸದರಿ ವಿಜಯಲಕ್ಷ್ಮೀ ನನ್ನ ತಂದೆಯ ಕಾನೂನು ಬದ್ಧ ಹೆಂಡತಿ ಎಂದರೆ ಸರಿಯಲ್ಲ. ವಿಜಯಲಕ್ಷ್ಮೀ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ವಿಜಯಲಕ್ಷ್ಮೀ ಇವರಿಗೆ ಸಂತಾನ ಇಲ್ಲದೇ ಇರುವುದರಿಂದ 2 ನೇ ಹೆಂಡತಿಯಾಗಿ ನನ್ನ ತಾಯಿ ಧವನಾಕ್ಷಮ್ಮ ಹಾಗೂ 3 ನೇ ಹೆಂಡತಿಯಾಗಿ ಶಾಂತಮ್ಮ ಇವರನ್ನು ವಿವಾಹ ಆಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾನು ಮತ್ತು ರೇವತಿ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ನನ್ನ ತಂದೆಯ 3 ನೇ ಹೆಂಡತಿ ಶಾಂತಮ್ಮ ಇವರಿಗೆ ಸೂಗಮ್ಮ, ಚಂದ್ರಶೇಖರ ಮತ್ತು ಶಿವಕುಮಾರ ಎಂದು ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ನನ್ನ ತಾಯಿ ನನ್ನ ತಂದೆಗೆ 2 ನೇ ಹೆಂಡತಿ ಹಾಗೂ ಶಾಂತಮ್ಮ ನನ್ನ ತಂದೆಗೆ 3 ನೇ ಹೆಂಡತಿಯಾಗಿದ್ದು ಸದರಿ ಶಾಂತಮ್ಮಳಿಗೆ 03 ಜನ ಮಕ್ಕಳಿರುವ ವಿಚಾರ ನನಗೆ ಗೊತ್ತಿದ್ದರೂ ಅವುಗಳನ್ನು ಮರೆಮಾಚಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ 03 ಜನ ಹೆಂಡಂದಿರ ನಡುವೆ ಕೌಟುಂಬಿಕ ಕಲಹಗಳು ಆಗಿರುತ್ತವೆ ಎಂದರೆ ಸರಿಯಲ್ಲ.

ನಮ್ಮ ತಂದೆ ಜೀವಿತ ಇರುವಾಗ ತನ್ನ 03 ಜನ ಹೆಂಡಂದಿರಲ್ಲಿ ಜಗಳ ಬಂದಿದ್ದರಿಂದ ಸದರಿ 03 ಜನ ಹೆಂಡತಿಯರಿಗೆ ಜೀವಿತ ಇರುವಾಗಲೇ ಸ್ವತ್ತುಗಳನ್ನು ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಕೊಪ್ಪರ ಗ್ರಾಮದಲ್ಲಿರುವ ಒಂದು ಮನೆ, ಜಾಗ ಹಾಗೂ ಜಮೀನುಗಳನ್ನು ನನ್ನ ತಾಯಿ ಹಾಗೂ ಶಾಂತಮ್ಮ ಮತ್ತು ಅವರ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದು ದಾವಾ ಸ್ವತ್ತುಗಳನ್ನು ವಿಜಯಲಕ್ಷ್ಮೀ ಇವರಿಗೆ ಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಿಜಯಲಕ್ಷ್ಮೀ ತನ್ನ ಜೀವಿತ ಅವಧಿಯವರೆಗೆ ವಾಸವಾಗಿದ್ದಳು ಎಂದರೆ ಸರಿ. ಸದರಿ ದಾವಾ ಸ್ವತ್ತುಗಳು ತನ್ನ ಭಾಗಕ್ಕೆ ಬಂದಿದ್ದರಿಂದ ದಿನಾಂಕ 21-12-2012 ರಂದು ತನ್ನ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿದ್ದರು ಎಂದರೆ ಸಾಕ್ಷಿಯು ಅಕ್ರಮವಾಗಿ ಮಾಡಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ಅಕ್ರಮವಾಗಿ ಮಾಡಿಸಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮುಟೇಶನ್‌ಗೆ ನನ್ನ ತಾಯಿ ಮತ್ತು ಶಾಂತಮ್ಮ ಒಪ್ಪಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಆಧಾರದ ಮೇಲೆ ಕೊಪ್ಪರ ಗ್ರಾಮದಲ್ಲಿರುವ ಮನೆ, ಜಮೀನು ಹಾಗೂ

ಜಾಗವನ್ನು ನಮ್ಮ ಹೆಸರಿಗೆ ಮತ್ತು ಶಾಂತಮ್ಮ ಇವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಶಾಂತಮ್ಮ ಯಾರು ಎಂಬುವುದು ಗೊತ್ತಿರುವುದಿಲ್ಲ ಅವರ ಹೆಸರಿನಲ್ಲಿ ಯಾವುದೇ ಸ್ವತ್ತುಗಳು ಇರುವುದಿಲ್ಲ ನಮ್ಮ ಹೆಸರಿನಲ್ಲಿ ಮಾತ್ರ ಸ್ವತ್ತುಗಳನ್ನು ಮಾಡಿಸಿಕೊಂಡಿರುತ್ತೆವೆ ಎಂದು ನುಡಿಯುತ್ತಾರೆ. ವಿಭಾಗ ಆಗಿರುವ ವಿಚಾರ ಗೊತ್ತಿದ್ದರಿಂದ ಸದರಿ ವಿಭಾಗದಂತೆ 2012 ರಲ್ಲಿಯೇ ವಿಜಯಲಕ್ಷ್ಮೀ ಇವರ ಹೆಸರಿಗೆ ಖಾತೆ ವರ್ಗಾವಣೆ ಆಗಿದ್ದರೂ ಅದನ್ನು ಪ್ರಶ್ನಿಸದೇ 11 ವರ್ಷಗಳ ನಂತರ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಜಯಲಕ್ಷ್ಮೀ ಇವರ ಹೆಸರಿಗೆ ಆಗಿರುವ ಖಾತೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಪುರಸಭೆಗೆ ಅರ್ಜಿ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

ವಿಜಯಲಕ್ಷ್ಮೀ ಇವರು ಸರಕಾರಿ ಆಸ್ಪತ್ರೆಯಲ್ಲಿ ನರ್ಸ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ವಿಜಯಲಕ್ಷ್ಮೀ ಯಾವ ವರ್ಷ ನಿವೃತ್ತಿ ಆಗಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ನಿಪಿ-26 ಚುನಾವಣಾ ಗುರುತಿನ ಚೀಟಿಯಲ್ಲಿ ವಿಜಯಲಕ್ಷ್ಮೀ ಇವರ ಗಂಡನ ಹೆಸರು ತೇಜರಾಜ ಎಂದು ಇರುತ್ತದೆ ಎಂದರೆ ಸಾಕ್ಷಿಯು ಅವರೇ ಸೇರಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಿಜಯಲಕ್ಷ್ಮೀ ಇವರ ಗುರುತಿನ ಚೀಟಿಯಲ್ಲಿ ಗಂಡನ ಹೆಸರು ತೇಜರಾಜ ಎಂದು ತಪ್ಪಾಗಿ ನಮೂದಿಸಿರುತ್ತಾರೆ ಎಂದು ನಮೂದಿಸಿರುವುದಿಲ್ಲ. ಸದರಿ ವಿಜಯಲಕ್ಷ್ಮೀ ನನ್ನ ತಂದೆ ತೇಜರಾಜ ಇವರ ಕಾನೂನು ಬದ್ಧ ಮೊದಲನೇ ಹೆಂಡತಿ ಆಗಿದ್ದರಿಂದ ಗುರುತಿನ ಚೀಟಿಯಲ್ಲಿ ಗಂಡನ ಹೆಸರು ತೇಜರಾಜ ಎಂದು ದಾಖಲು ಇರುತ್ತದೆ ಎಂದರೆ ಸರಿಯಲ್ಲ. ನಿವೃತ್ತಿಯಾದ ನಂತರ ವಿಜಯಲಕ್ಷ್ಮೀ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ಮುಕುಂದ ವಿಜಯಲಕ್ಷ್ಮೀ ಇವರ ಖಾಸಾ ತಮ್ಮ ಎಂದರೆ ಸರಿ. ಸದರಿ ವಿಜಯಲಕ್ಷ್ಮೀ ಅನಾರೋಗ್ಯದಿಂದ ಬಳಲುತ್ತಿದ್ದಾಗ ಅವರ ಯೋಗಕ್ಷೇಮವನ್ನು ಪ್ರತಿವಾದಿ ಮತ್ತು ಅವರ ಹೆಂಡತಿ ಸುಧಾ ನೋಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿ ಮತ್ತು ಆತನ ಹೆಂಡತಿ ಸುಧಾ ವಿಜಯಲಕ್ಷ್ಮೀ ಇವರನ್ನು ಚೆನ್ನಾಗಿ ನೋಡಿಕೊಂಡಿದ್ದರಿಂದ ದಾವಾ ಸ್ವತ್ತುಗಳನ್ನು ಸದರಿ ಇಬ್ಬರಿಗೆ ಹಕ್ಕು ಬಿಡುಗಡೆ ಪತ್ರದ ಮೂಲಕ ಮಾಲೀಕತ್ವವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮುಕುಂದ ಇವರಿಗೆ ಬಿಟ್ಟು ಕೊಟ್ಟಿರುವುದಿಲ್ಲ ಸುಧಾ ಇವರಿಗೆ ಖಾಲಿ ಜಾಗೆಯನ್ನು ಬಿಟ್ಟು ಕೊಟ್ಟಿದ್ದು, ಸುಧಾ ಅವರ ಮರಣದ ನಂತರ ಸದರಿ ಸ್ವತ್ತನ್ನು ಮುಕುಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2013 ರಲ್ಲಿ ಸುಧಾ ಇವರ ಹೆಸರಿಗೆ ಮುಟೇಶನ್ ಆಗಿರುತ್ತದೆ. ಮುಕುಂದ ಇವರ ಹೆಸರಿಗೆ 2023 ರಲ್ಲಿ ಮುಟೇಶನ್ ಆಗಿರುತ್ತದೆ.

ಸುಧಾ ಮತ್ತು ಮುಕುಂದ ಇವರ ಹೆಸರಿನಲ್ಲಿ ಆಗಿರುವ ಮುಟೇಶನ್ ಪ್ರಶ್ನಿಸಿ ಎಲ್ಲಿಯೂ ಮೇಲ್ಮನವಿ ಸಲ್ಲಿಸಿರುವುದಿಲ್ಲ. ವಿಜಯಲಕ್ಷ್ಮೀ ದಾವಾ ಸ್ವತ್ತಿನ ತನ್ನ ಹಕ್ಕನ್ನು ಬಿಡುಗಡೆ ಮಾಡಿ ಮುಕುಂದ ಮತ್ತು ಆತನ ಹೆಂಡತಿಗೆ ನೀಡಿದ್ದರಿಂದ ಸದರಿ ಸ್ವತ್ತುಗಳ ಮಾಲೀಕರು ಮತ್ತು ಕಬ್ಜೆದಾರರು ಮುಕುಂದ ಮತ್ತು ಆತನ ಹೆಂಡತಿ ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಮತ್ತು ನಾನು ಮತ್ತು ನಮ್ಮ ಕುಟುಂಬದವರಾರೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ 3 ನೇ ಹೆಂಡತಿ ಮತ್ತು ಆಕೆಯ ಮಕ್ಕಳನ್ನೂ ತೋರಿಸದೇ ನಾವು ಮಾತ್ರ ನನ್ನ ತಂದೆಯ ವಾರಸುದಾರರು ಎಂದು ಹೇಳಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಮೌಲ್ಯ ಅಂದಾಜು 8 ರಿಂದ 10 ಲಕ್ಷ ಇರಬಹುದು. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಅಂದಾಜು ಮೌಲ್ಯ 30 ಲಕ್ಷ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ದಿನಾಂಕ 05-09-1987 ರಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿದಾಗಿನಿಂದಲೂ ದಾವೆ ಸಲ್ಲಿಸುವವರೆಗೆ ವಿಜಯಲಕ್ಷ್ಮೀ ಹಾಗೂ ಪ್ರತಿವಾದಿ ಕುಟುಂಬದವರೂ ಸ್ವಾಧೀನತೆ ಇದ್ಯಾಗ್ಯೂ ಅವರ ಸ್ವಾಧಿನಕ್ಕೆ ನಾವು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಕೇರ್ ಟೇಕರ್ ಆಗಿ ನಾವು ಸ್ವಾಧೀನದಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ಸದರಿ ವಿಜಯಲಕ್ಷ್ಮೀ ಇವರನ್ನು ಕೇರ್ ಟೇಕರ್ ಅನ್ನಾಗಿ ಇಟ್ಟಿರುವ ವಿಚಾರವನ್ನು ವಾದ ಪತ್ರದಲ್ಲಾಗಲೀ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆ ವಿಜಯಲಕ್ಷ್ಮೀಯನ್ನು ಮದುವೆ ಆಗಿರುವುದಿಲ್ಲ ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.